**ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ 12-11-2024.**

**ಪಾಟೀ ಸವಾಲುಃ ಎದುರದಾರ ಪರ ಶ್ರೀ. ಎಸ್ ಜಿ ಯು ವಕೀಲರಿಂದಃ**

1. ನಾನು ಶಾಲೆಯನ್ನು ಕಲಿತಿಲ್ಲ ಆದ್ದರಿಂದ ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಸಾಕ್ಷಿ ಮುಂದುವರೆದು 3ನೇ ತರಗತಿಯವರೆಗೆ ಮಾತ್ರ ಓದಿದ್ದೇನೆ. ಈ ಪ್ರಕರಣವನ್ನು ದಾಖಲು ಮಾಡಲು ನನ್ನ ಅಕ್ಕನ ಮಗ ಮಾಹಿತಿ ನೀಡಿದ್ದಾನೆ. ಕೇಸಿನ ಬಗ್ಗೆ ನನ್ನ ಅಕ್ಕನ ಮಗ ಮಾಹಿತಿಯನ್ನು ನನಗೆ ನೀಡಿದ್ದಾನೆ. ಈ ಪ್ರಕರಣವನ್ನು ಪರಿಹಾರ ಕೋರಿ ಸಲ್ಲಿಸಿದ್ದೇನೆ. ನನಗೆ 38 ವರ್ಷ ವಯಸ್ಸು ಎಂದು ತೋರಿಸಲು ಕಾಗದ ಪತ್ರವನ್ನು ಕೊಟ್ಟಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಕುಟೆನೊ ನಗರದಲ್ಲಿ ವಾಸವಾಗಿದ್ದೇನೆ ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ. ನನ್ನ ವಯಸ್ಸಿನ ಬಗ್ಗೆ ಮತ್ತು ನಾನು ಹೇಳಿದ ವಿಳಾಸದಲ್ಲಿ ವಾಸ ವಾದ ಬಗ್ಗೆ ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಬಸ್ಸಿನಿಂದ ವಾಪಸ್ಸ ಬರುತ್ತಿದ್ದೆ ಎಂದು ಹೇಳಿದ ದಿನಾಂಕ 11-04-2022. ಆ ಬಸ್ಸಿನಲ್ಲಿ ಬಹಳಷ್ಟು ಜನ ಇದ್ದರು. ಅಪಘಾತವಾದಾಗ ಇನ್ನು ಕೆಲವು ಜನರಿಗೆ ಪೆಟ್ಟಾಗಿದೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯವಾದ ಜನರ ಹೆಸರು ನನಗೆ ಗೊತ್ತಿಲ್ಲ. ಆ ದಿನ ಬಸ್ಸಿನ ಚಾಲಕನೆ ನನ್ನನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗಿದ್ದನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಕ್ಕನ ಮಗ ಕರೆದುಕೊಂಡು ಹೋಗಿದ್ದಾನೆ ಎನ್ನುತ್ತಾರೆ.

2. ಅಪಘಾತವಾದ ದಿನ ನಾನೆ ಹಂಪ ಬಂದ ನಂತರ ಕುಸಿದು ಕುಳಿತ್ತಿದ್ದೆ ಮತ್ತು ನನಗೆ ಮೊದಲಿನಿಂದಲು ನೋವು ಇತ್ತು ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದೆನೆ ಎಂದರೆ ಸರಿಯಲ್ಲ. ಮೊದಲಿನಿಂದಲು ನನಗೆ ನೋವು ಇದ್ದು ಆ ಬಗ್ಗೆ ನಾನು ಚಿಕಿತ್ಸೆ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ಆ ವೇಳೆಯಲ್ಲಿ ನನ್ನ ಒಬ್ಬಳನ್ನೆ ಬಸ್ಸಿನ ಚಾಲಕನು ಆಸ್ಪತ್ರೆಗೆ ಕರೆದುಕೊಂಡು ಚಿಕಿತ್ಸೆಯನ್ನು ಕೊಡಿಸಿರುತ್ತಾರೆ ಹಾಗೂ ಉಳಿದ ಪ್ರಯಾಣಿಕರನ್ನು ಅಲ್ಲಿಯೇ ನಿಲ್ಲಿಸಿದ್ದರು. ಬಸ್ಸಿನ ಚಾಲಕನು ಬಸ್ಸಿನಲ್ಲಿಯೇ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದನು ಎಂದರೆ ಸಾಕ್ಷಿಯು ನನಗೆ ಅರಿವು ಇರಲಿಲ್ಲ ಆ ಕಾರಣಕ್ಕಾಗಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನಗೆ ಎಚ್ಚರ ಆದಾಗ ಹುಬ್ಬಳಿಯ ಕೆ ಎಮ್ ಸಿ ಆಸ್ಪತ್ರೆಯಲ್ಲಿ ಇದ್ದೆ. ಬಸ್ಸಿನ ಚಾಲಕನು ನಾನು ಚೆನ್ನಾಗಿ ಇದ್ದೆನೆ ಎಂದು ಹೇಳಿದ ನಂತರ ಅವನು ವಾಪಾಸ್ಸ ಹೋಗಿದ್ದನು ಎಂದರೆ ಸರಿಯಲ್ಲ. ಕೆ ಎಮ್ ಸಿ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೆನೆ. ಕೆ ಎಮ್ ಸಿ ಆಸ್ಪತ್ರೆ ಹುಬ್ಬಳ್ಳಿಯಲ್ಲಿ 5-6 ದಿನ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ದಾಂಡೇಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ನಂತರ ನನ್ನ ಅಕ್ಕನ ಮಗ ಈ ವಿಷಯವನ್ನು ಹೇಳಿದ್ದಾನೆ. ನಾನು ದಿನಾಂಕ 11-04-2022 ರಿಂದ ಎಷ್ಟು ದಿನ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ನಾನು ರೂ.2,50,000/-ಗಳನ್ನು ವೈದ್ಯಕೀಯ ಖರ್ಚು ಎಂದು ಹೇಳಿದ್ದು ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿ ತಿಂಗಳಿಗೆ ರೂ.25,000/-ಗಳನ್ನು ಗಳಿಸುತ್ತಿದ್ದೆ ಎಂದು ತೋರಿಸಲು ಯಾವುದೆ ದಾಖಲಾತಿಯನ್ನು ಹಾಜರ ಪಡಿಸಿಲ್ಲ ಆ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಪ್ರತಿ ತಿಂಗಳು 25,000/- ಸಂಬಳ ಎಂದು ನನಗೆ ಕೊಡುತ್ತಿದ್ದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಅವರು ನನಗೆ ನಗದು ಹಣ ಕೊಡುತ್ತಿದ್ದರು. ನನಗೆ Rest in Home Stay ಇವರು ಪ್ರತಿ ತಿಂಗಳು ರೂ.25,000/- ಸಂಬಳ ಕೊಡುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದನೆ ಎಂದರೆ ಸರಿಯಲ್ಲ. ಹೆಚ್ಚಿ ಗೆ ಪರಿಹಾರ ಪಡೆಯುವ ಸಲುವಾಗಿ ನಿಪಿ.13 ನೇದ್ದನು ಹಾಜರು ಮಾಡಿದ್ದೆನೆ ಎಂದರೆ ಸರಿಯಲ್ಲ. ಬಸ್ಸಿನ ಚಾಲಕನತಪ್ಪಿ ನಿಂದ ಅಪಘಾತವಾಗಿಲ್ಲ ನಾನೇ ಜೋರಾಗಿ ಕುಸಿದು ಕುಳಿತು ಗಾಯ ಮಾಡಿಕೊಂಡಿದ್ದೆನೆ ಎಂದರೆ ಸರಿಯಲ್ಲ. ಕೊವಿಡ್ - 19 ದಿಂದ ಎದುರದಾರರಿಗೆ ಬಹಳಷ್ಟು ನಷ್ಟ ಆಗಿದೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಸದರಿ ವಕೀಲರು ಮುಂದುವರೆದ ಪಾಟೀ ಸವಾಲಾಗಾಗಿ ಸಮಯಕೋರಿದ್ದರಿಂದ ಮುಂದುಡಲಾಯಿತು.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ**
**ಖಾನಾಪೂರ.**